

# ಡೈಮಂಡ್‌ಗೆ ಡಿಮಾಂಡ್

ವಜ್ರ ದುಬಾರಿ ಆಭರಣವಾದರೂ ಒಂದಾದರೂ ವಜ್ರದ ಒಡವೆ ಹೊಂದಿರಬೇಕು ಎಂಬುದು ಮಹಿಳೆಯರ ಆಸೆ. ಇದಕ್ಕಾಗಿಯೇ ಮನಮೋಹಕ ಪೆಂಡೆಂಟ್, ಕರಿಮಣಿ ಸರ ವೈವಿಧ್ಯಮಯ ವಿನ್ಯಾಸದಲ್ಲಿ ಬಂದಿದ್ದು, ಆಭರಣಪ್ರಿಯರ ಮನದಾಸೆ ಪೂರೈಸುತ್ತಿದೆ.

■ **ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರಗಳು: ಮುಳಿಯ ಕೇಶವಭಟ್ ಅಂಡ್ ಸನ್ಸ್





ವಜ್ರ ಹೊಳಪಿನ ಸಂಕೇತ, ಗಟ್ಟಿತನಕ್ಕೆ ಇನ್ನೊಂದು ಹೆಸರೇ ವಜ್ರ. ಡೈಮಂಡ್ ಎಂದು ಆಂಗ್ಲಭಾಷೆಯಲ್ಲಿ ಕರೆಸಿಕೊಳ್ಳುವ ವಜ್ರದ ಒಡವೆ ಎಂದರೆ ಮಹಿಳೆಯರಿಗೆ ಒಂದು ತೂಕ ಹೆಚ್ಚೇ ಪ್ರೀತಿ. ಮಧ್ಯಮವರ್ಗದವರಿಗೆ ಕೈಗೆಟುಕದೇ ಇದ್ದರೂ ತಿಜೋರಿಯಲ್ಲಿ ಒಂದು ಸಣ್ಣ ವಜ್ರದ ಒಡವೆಯಾದರೂ ಇರಬೇಕೆಂಬ ತುಡಿತ ಮಾತ್ರ ಇದ್ದೇ ಇರುತ್ತದೆ. ಕಾರಣ ಕೊರಳಲ್ಲಿ ಯಾವುದೇ ಸರ, ಹಾರ ಇರಲಿ ಡೈಮಂಡ್ ಒಂದು ಮಿನುಗುತ್ತಿದ್ದರೆ ಅದರ ಶೋಭೆಯೇ ಬೇರೆ. ಸಣ್ಣ ಸಣ್ಣ ಡೈಮಂಡ್ ಹರಳುಗಳ ಪೆಂಡೆಂಟ್ ಇಂದು ಕೈಗೆಟಕುವ ದರದಲ್ಲಿ ಮಾರುಕಟ್ಟೆಯಲ್ಲಿ ಲಭ್ಯ. ಈ ಪೆಂಡೆಂಟ್‌ಗಳನ್ನು ಹೇಗೆ ನಮ್ಮ ಹಾರಗಳಲ್ಲಿ ಜೋಡಿಸಿ ಧರಿಸಬಹುದು ಎಂಬುದು ನಮ್ಮ ಕೈಚಳಕದಲ್ಲಿಯೇ ಅಡಗಿದೆ.

ಬಿಳಿ ಹೊಳಪಿನ ಡೈಮಂಡ್ ಹರಳುಗಳ ಪೆಂಡೆಂಟ್ ಅನ್ನು ಸಾಧಾರಣವಾಗಿ ಕರಿಮಣಿ ಸರಕ್ಕೆ ಅಳವಡಿಸಿದರೆ ನೋಡಲು ಬಹಳ ಆಕರ್ಷಕವಾಗಿರುತ್ತದೆ. ಪೆಂಡೆಂಟ್‌ನ ಸೈಜ್ ಹೊಂದಿಕೊಂಡು ಕರಿಮಣಿ ಸೈಜ್ ಇರಬೇಕು. ಕೆಲವು ಪೆಂಡೆಂಟ್‌ಗಳು ಅಗಲವಾಗಿ ದೊಡ್ಡ ದೊಡ್ಡ ವಿನ್ಯಾಸದ್ದಾಗಿದ್ದರೆ ದೊಡ್ಡ ಅಗಲದ ಪೆಂಡೆಂಟ್ ಭಾರವಾಗಿದ್ದರೂ ಹೊಂದಿಕೊಳ್ಳುತ್ತದೆ. ಅಗಲವಾಗಿ ಭಾರವಿದ್ದ ಪೆಂಡೆಂಟನ್ನು ಸಣ್ಣ ಸಣ್ಣ ಕರಿಮಣಿ ಹೊಂದಿರುವ ಎರಡು ಎಳೆ ಸರ ಹಾಕಿ ಧರಿಸಬಹುದು. ಒಂದು ಎಳೆ ಸರ ಹಾಕಿಧರಿಸಬಹುದು. ಒಂದು ಎಳೆ ಸರ ಪ್ರೀತಿ ಇರುವವರು ಪೆಂಡೆಂಟ್ ಭಾರವನ್ನು ಅನುಸರಿಸಿ ಧರಿಸಬಹುದು.

ಸಾಧಾರಣವಾಗಿ ನಿತ್ಯ ಬಳಕೆಗೆ ಒಂದು ಎಳೆ, ಎರಡು ಎಳೆ ಶಾರ್ಟ್ ಕರಿಮಣಿ ಸರ ಜೊತೆಗೆ ಒಂದು